# ದಡ ಸೇರೀತೆ ಕನ್ನಡ ಮಾಧ್ಯಮ ದೋಣಿ



■ ಕೋಡಿಬೆಟ್ಟು ರಾಜಲಕ್ಷ್ಮಿ

ಇಂಗ್ಲಿಷ್ ಮಾಧ್ಯಮಗಳಲ್ಲಿ ಕಲಿಯದೆ ಹೋದರೆ ಮಕ್ಕಳಿಗೆ ಉಳಿಗಾಲವಿಲ್ಲ ಎನ್ನುವುದು ಬಹುಸಂಖ್ಯೆಯ ಪೋಷಕರ ನಂಬಿಕೆ. 'ನಮ್ಮ ಮಕ್ಕಳನ್ನು ಕನ್ನಡ ಶಾಲೆಯಲ್ಲಿಯೇ ಓದಿಸುತ್ತೇವೆ' ಎಂದು ಪ್ರಜ್ಞಾಪೂರ್ವಕವಾಗಿ ಸರ್ಕಾರಿ ಶಾಲೆಗಳ ಬೆನ್ನಿಗೆ ನಿಂತ ಪೋಷಕರೂ ಇದ್ದಾರೆ. ಆದರೆ, ಇಂಗ್ಲಿಷ್ ಮಾಧ್ಯಮದ ಎದುರು ದೇಸಿ ಪರ್ಯಾಯಗಳನ್ನು ರೂಪಿಸಬೇಕಾದ ಸರ್ಕಾರಗಳೇ ರಾಜ್ಯಭಾಷೆಗಳ ಕತ್ತುಹಿಸುಕುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡುತ್ತಿವೆ.